ಆಗಸ್ಟ್ 21ರ ಸಂಚಿಕೆಯಲ್ಲಿ ಡಾ.ವಸಂತ ತಿಮಕಾಪುರ ಅವರು ಬಿ.ಟಿ. ಬೆಳೆ ಏಕೆ ಬೇಕು? ಎಂಬ ಮುಖಪುಟ ಲೇಖನ ಬರೆದಿದ್ದರು. ಇದಕ್ಕೆ ಬಂದ ಎರಡು ಪ್ರತಿಕ್ರಿಯೆಗಳು ಇಲ್ಲಿವೆ.

## ಬಿಟಿ ಬೆಳೆ ಏಕೆ ಬೇಕು?

ನಾನೊಬ್ಬ ರೈತ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಣೇಕಟ್ಟೆ ನನ್ನೂರು. ಈ ವರ್ಷ ಸಾವಯವ ಕೃಷಿಯಲ್ಲಿ ಇಪ್ಪತ್ತು ಗುಂಟೆ ಪ್ರದೇಶದಲ್ಲಿ ನಾಟಿ ತಳಿಯ ಬದನೆ ಬೆಳೆದಿದ್ದೇನೆ. ಈ ಬದನೆಯಲ್ಲಿ ಒಂದೇ ಒಂದು ಕಾಂಡಕೊರಕ ಅಥವಾ ಕಾಯಿಕೊರಕ ಹುಳಗಳ ಬಾಧೆಯನ್ನು ತೋರಿಸಿದರೆ ವಸಂತ ಕುಮಾರ್ ರವರಿಗೆ ನನ್ನ ಕೃಷಿ ಭೂಮಿಯನ್ನು ಬಿಟ್ಟುಕೊಡುತ್ತೇನೆ ಎಂದು ಚಾಲೆಂಜ್ ಮಾಡುತ್ತೇನೆ. ಇಪ್ಪತ್ತು ಗುಂಟೆಯಲ್ಲಿ ಗಳಿಸಿದ ಲಾಭ 40 ಸಾವಿರ ರೂಪಾಯಿ. ಇದು ಯಾವ ಬಿಟಿ ತಳಿಯೂ ಅಲ್ಲ. ದೇಸಿ ತಳಿ ಹಾಗೂ ಬೇವಿನ ಬೀಜದ ಹಿಂಡಿ, ತಿಪ್ಪೆ ಗೊಬ್ಬರ, ಗಂಜಲವನ್ನು ಮಾತ್ರ ಬಳಸಿರುತ್ತೇನೆ. ನಮ್ಮ ವಿಜ್ಞಾನಿಗಳು ಇಂತಹ ಪ್ರಯೋಗಗಳನ್ನು ರೈತರಿಗೆ ತಿಳಿಸಿದರೆ ಅದರಿಂದ ಬೀಜ ಖರೀದಿ ಮಾಡುವ ಖರ್ಚು ಕೂಡ ರೈತರಿಗೆ ಉಳಿಯುತ್ತದೆ.

ಲೇಖಕರು ಚರ್ಚಿಸಿರುವ ಬಗೆ ತುಂಬಾ ವೈರುಧ್ಯಮಯ. ಈಗಿನ ಆಧುನಿಕ ಅಣುಜೀವಿಶಾಸ್ತ್ರದ ಜೈವಿಕ ತಂತ್ರಜ್ಞಾನದ ವರದ ಫಲವಾಗಿ ಈ ಪ್ರಾಣಿ ಸಸ್ಯಗಳ ನಡುವೆ, ಏಕಾಣು ಜೀವಿಯಿಂದ ಹಿಡಿದು ಬೃಹತ್ ಸಸ್ತನಿ ತಿಮಿಂಗಲದವರೆಗೆ ಅಕ್ಷರಶಃ ಒಂದು ಜೀವಿಯ ಗುಣಾಣುವನ್ನು ಯಾವುದೇ ನಿರ್ಬಂಧವಿಲ್ಲದೆ ಮತ್ತಾವುದೇ ಜೀವಿಗೆ ವರ್ಗಾಯಿಸಬಹುದು ಎಂದು ಹೇಳುತ್ತಾರೆ. ಮತ್ತೊಮ್ಮೆ ಬಿಟಿ ಪರವಾಗಿ ಚರ್ಚಿಸುತ್ತಾ ಹ್ಯುಮಲಿನ್ ಎಂಬ ಇನ್ಸುಲಿನ್ ಔಷಧಿ ತಯಾರಿಕೆಯಲ್ಲಿ ಜೈವಿಕ ತಂತ್ರಜ್ಞಾನ ತರಲು ಕಾರಣ ಪ್ರಾಣಿಜನ್ಯ ಇನ್ಸುಲಿನ್ ಚಿಕಿತ್ಸೆ ಪಡೆಯುತ್ತಿದ್ದವರಿಗೆ ಧಾರ್ಮಿಕ ಪ್ರಜ್ಞೆ ಅಥವಾ ಮಡಿವಂತಿಕೆ ಏನಾದರೂ ಕಾಡಿದ್ದರೆ ಅಂತಹ ಮಧುಮೇಹಿಗಳು ಬಹಳ ಕಾಲ ಬದುಕಲಾಗುತ್ತಿರಲಿಲ್ಲ ಎಂದು ಹೇಳುತ್ತಾರೆ. ಪ್ರಾಣಿಯ ಜೀನ್ ಒಂದನ್ನು ಸಸ್ಯದ ಒಳಗೆ ಸೇರಿಸಿದರೆ ಅದರಿಂದ ನಾವು ಪ್ರಾಣಿಯ ಒಂದಂಶವನ್ನು ತಿಂದಂತೆ ಆಗುವುದಿಲ್ಲವೆ? ಜೈವಿಕ ತಂತ್ರಜ್ಞಾನದಿಂದ ಹಿಂದೂಗಳ, ಜೈನರ ಮತ್ತು ಅನೇಕ ಸಸ್ಯಾಹಾರಿಗಳ ಧಾರ್ಮಿಕ ಭಾವನೆಗೆ ಧಕ್ಕೆ ಆಗುವುದಿಲ್ಲವೆ?

ಮತ್ತೊಂದು ಕಡೆ ಅದೇ ರೀತಿ ಶೇ.95 ಬಿಟಿ ಹತ್ತಿಯೆಂದರೆ ಒಂದು ಕಂಪನಿಯ ಒಂದೇ ತಳಿಯ ಹತ್ತಿಯನ್ನು ಮಾರಿ ಏಕಸ್ವಾಮ್ಯತೆಯನ್ನು ಸಾಧಿಸುತ್ತಿದೆ ಎಂಬ ಭಾವನೆಯೂ ಬೇಡ ಎನ್ನುತ್ತಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯ ರೈತಪರ ಕಾಳಜಿ ವಿಜ್ಞಾನಿಗಳಾದ ಕಟಗೇರಿಯವರು ಅಭಿವೃದ್ಧಿಪಡಿಸಿದ್ದ ರೈತರೇ ಮತ್ತೆ ಉತ್ಪಾದಿಸಿಕೊಳ್ಳಬಹುದಾಗಿದ್ದ ಬಿಟಿ ಹತ್ತಿ ತಳಿಗಳ ಒಳಗೆ ಕಂಪನಿಯೊಂದು ಕದ್ದು ತನ್ನ ಕಂಪನಿಯ ಬೀಜ ಸೇರಿಸಿ ರೈತ ಪರ ವಿಜ್ಞಾನಿಯನ್ನು ಕೋರ್ಟ್ ಮೆಟ್ಟಿಲೇರಿಸಿದ್ದು ಯಾಕೆ? ಅದಿರಲಿ ಬೀಜ ನಿಗಮಗಳು ಯಾಕೆ ರೈತರಿಗೆ ಬೇಕಾದ ಬೀಜ ಉತ್ಪಾದಿಸುತ್ತಿಲ್ಲ. ಬೀಜ ಕಂಪನಿಗಳು ಬೇಕೆ?

ರೈತರ ಹೊಲಗಳಲ್ಲಿ ಇಂದಿಗೂ ನೈಸರ್ಗಿಕವಾಗಿ ಜೈವಿಕ ತಂತ್ರಜ್ಞಾನವು ನಡೆದೇ ಇರುತ್ತದೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಗುಣಾಣುಗಳು ಬೆರಕೆಯಾಗುತ್ತವೆ. ಈ ಪ್ರಕ್ರಿಯೆಯಲ್ಲಿ ಪರಿಸರದ ಒತ್ತಡಕ್ಕೆ ಅನುಗುಣವಾಗಿ ಗುಣಾಣುಗಳು ಯಾವುದು ಇರಬೇಕೆಂದು ನಿರ್ಧಾರವಾಗುತ್ತದೆ; ಅಲ್ಲದೆ ಮಾರ್ಪಾಡಾಗುತ್ತದೆ. ಆದ್ದರಿಂದಲೇ ಅಷ್ಟೊಂದು ವೈವಿಧ್ಯವಿದೆ. ಚೌಳುಭೂಮಿಯಲ್ಲಿ ಬೆಳೆಯುವ ಭತ್ತದ ತಳಿ ಇದೆ, ಆಳನೀರಿನಲ್ಲಿಯೂ ಬದುಕುವ ನೆರೆ ನಿರೋಧಕ ಕರೆ ಜಡ್ಡು ಭತ್ತವಿದೆ. ಬರನಿರೋಧಕ ಮುಂಡಗ ಭತ್ತ ಇತ್ಯಾದಿ ತಳಿಗಳ ಅಪಾರ ಭಂಡಾರವಿದೆ. ಇಂತಹ ದೇಸೀ ತಳಿಗಳ ಬಗ್ಗೆ ವಿಜ್ಞಾನಿಗಳು ಬೆಳಕು ಚೆಲ್ಲಬೇಕಲ್ಲವೆ?

– ಅಣೇಕಟ್ಟೆ ವಿಶ್ವನಾಥ್

## ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಅಂಗೈ ಹುಣ್ಣಿಗೆ ಕನ್ನಡಿ ಯಾಕೆ? ಆದರೆ ಈ ಜಾಣ ಕುರುಡ, ಕಿವುಡರಿಗೆ ಕನ್ನಡಿ ಹಿಡಿದೇ ತೋರಿಸಬೇಕು. ಕಳೆದ ವರ್ಷ ಕರ್ನಾಟಕದ ಐದು ಜಿಲ್ಲೆಗಳ ನಾಲ್ಕು ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಹುಲುಸಾಗಿ ಬೆಳೆದು ಕಾಯಿಬಿಡದೆ ವಿಫಲವಾದ ಬಿ.ಟಿ.ಹತ್ತಿ ಬೆಳೆಗೆ ಇವರ ಉತ್ತರವೇನು? ವಿಜ್ಞಾನಿಯಾಗಿದ್ದರೆ. ಜವಾಬ್ದಾರಿಯಿಂದ ಉತ್ತರಿಸುತ್ತಿದ್ದರು. ಆದರೆ ಇವರು ವಿಜ್ಞಾನಿಗಳ ವೇಷದಲ್ಲಿರುವ ದಲ್ಲಾಳಿಗಳು. ಆದ್ದರಿಂದಲೇ ವಿಫಲವಾದ ಬಿ.ಟಿ.ಹತ್ತಿಯ ಉದಾಹರಣೆ ಕಣ್ಣೆದುರಿದ್ದರೂ ಅದರ ಬಗೆಗೆ ಚಕಾರವೆತ್ತದ ಇವರಿಗೆ ಏನೆನ್ನಬೇಕು?

ಕಳೆದ ವರ್ಷ ವಿಫಲವಾದ ಬಿ.ಟಿ. ಹತ್ತಿಯಿಂದಾದ ನಷ್ಟ ಎಷ್ಟು ಗೊತ್ತೇ? ಬರೊಬ್ಬರಿ ಎರಡು ಸಾವಿರ ಕೋಟಿ ರೂಪಾಯಿ. ಬಿ.ಟಿ.ಹತ್ತಿ ವಿಫಲವಾದ ರೈತರ ಹೊಲಗಳಿಗೆ ಭೇಟಿ ಕೊಟ್ಟು ಪರಿಶೀಲಿಸಿದ್ದರೆ ಇವರ ಬಿ.ಟಿ. ಪರ ತುತ್ತೂರಿಗೆ ಬದ್ಧತೆಯಾದರೂ ಇರುತ್ತಿತ್ತು. ಭಾರತದಲ್ಲಿ ಬಿ.ಟಿ. ಬೆಳೆ ವಿಲ್ಲನ್ ಆಗಲು ಇದಿಷ್ಟು ಕಾರಣ ಸಾಲದೆ? ಅಮೆರಿಕದಲ್ಲಿ ಬಿ.ಟಿ.ಬೆಳೆಯ ಉತ್ಪನ್ನಗಳನ್ನು ತಿಂದು ಆರೋಗ್ಯದ ಮೇಲೆ ದುಷ್ಪರಿಣಾಮವಾದ ಮತ್ತು ನ್ಯಾಯಾಲಯಗಳಲ್ಲಿ ಬಿ.ಟಿ ವಿರುದ್ಧ ಹೋರಾಡುತ್ತಿರುವ ರೈತರ ಹೋರಾಟಗಳ ಬಗೆಗೆ ವರದಿಗಳೇ ಇಲ್ಲ ಎನ್ನುವ ಇವರಿಗೆ ಹಗಲು ಕುರುಡು ಇರಬೇಕು.

ಜಗತ್ತಿನ 28 ದೇಶಗಳು ಬಿ.ಟಿ.ಯನ್ನು ಒಪ್ಪಿ, ಅಪ್ಪಿಕೊಂಡಿವೆ ನಿಜ. ಇನ್ನುಳಿದ ಐವತ್ತಕ್ಕೂ ಹೆಚ್ಚು ದೇಶಗಳು ಏಕೆ ನಿಷೇಧಿಸಿವೆ? ಭಾರತಕ್ಕಿಂತ ಬಹುಪಾಲು ಮುಂದುವರಿದ ದೇಶಗಳಲ್ಲವೆ ಅವು? ಕಾರ್ಪೋರೇಟ್ ಕಂಪೆನಿಗಳ ಬಿಗಿ ಹಿಡಿತದಲ್ಲಿ ಸಿಲುಕಿರುವ ಅಮೆರಿಕಕ್ಕಿಂತ, ಭಾರತ ಮತ್ತು ಯೂರೋಪಿನ ದೇಶಗಳಲ್ಲಿ ಪ್ರಜಾಪ್ರಭುತ್ವ ಇನ್ನು ಜನ ಸಾಮಾನ್ಯರ ಕೈಯಲ್ಲಿದೆ ಎಂಬುದಕ್ಕೆ ಬಿ.ಟಿ. ನಿಷೇಧ ಒಂದು ದೊಡ್ಡ ನಿದರ್ಶನ. ಅದಕ್ಕೆ ಬಿ.ಟಿ. ಅಲ್ಲೆಲ್ಲಾ ವಿಲನ್.

– ಉಗ್ರನರಸಿಂಹೇಗೌಡ ಸಣಬ

## ನಕ್ಕುಬಿಡಿ

ಒಂದು ದಿನ ಕನ್ನಡ ಅಧ್ಯಾಪಕರು 10ನೇ ತರಗತಿಯ ವಿದ್ಯಾರ್ಥಿನಿಯರಿಗೆ 'ಬಡ ಕುಟುಂಬ' ವಿಷಯದ ಬಗ್ಗೆ ಪ್ರಬಂಧ ಬರೆಯಲು ಹೇಳಿದರು.

ಶ್ರೀಮಂತರ ಮಗಳು ಬರೆದ ಪ್ರಬಂಧದ ಕೆಲವು ಸಾಲುಗಳು ಹೀಗಿದ್ದವು: 'ಒಂದು ಊರಿನಲ್ಲಿ ಬಡ ಕುಟುಂಬವಿತ್ತು. ತಂದೆ ಬಡವನಾಗಿದ್ದ. ತಾಯಿ ಬಡವಿ. ಮಕ್ಕಳೂ ತುಂಬ ಬಡವರಾಗಿದ್ದರು. ಆ ಕುಟುಂಬಕ್ಕೆ ನಾಲ್ಕು ಜನ ಕೆಲಸಗಾರರಿದ್ದರು. ಅವರೂ ಸಹ ಬಡವರಾಗಿದ್ದರು. ಅವರ ಮರ್ಸಿಡೀಸ್ ಕಾರಿನ ಬಾಗಿಲುಗಳ ಬಣ್ಣ ಮಾಸಿತ್ತು. ಅವರ ಬಡ ಚಾಲಕ ಮಕ್ಕಳನ್ನು ಆ ಕಾರಿನಲ್ಲಿಯೇ ಶಾಲೆಗೆ ಬಿಟ್ಟುಬರುತ್ತಿದ್ದ. ಮಕ್ಕಳ ಬಳಿ ಹಳೆಯ ಎನ್ 95 ಮೊಬೈಲ್‌ಗಳಿದ್ದವು. ಮಕ್ಕಳು ವಾರದಲ್ಲಿ ಮೂರು ದಿನಗಳು ಮಾತ್ರ ಹೊಟೇಲ್‌ಗೆ ಊಟಕ್ಕೆ ಹೋಗುತ್ತಿದ್ದರು. ಮನೆಯಲ್ಲಿ ಕೇವಲ ಮೂರು ಸೆಕೆಂಡ್ ಹ್ಯಾಂಡ್ ಎ.ಸಿ.ಗಳಿದ್ದವು. ಇಡೀ ಕುಟುಂಬ ಬಹು ಕಷ್ಟದಿಂದ ದಿನಗಳನ್ನು ಕಳೆಯುತ್ತಿತ್ತು.'

★★★



ಒಬ್ಬ ವ್ಯಕ್ತಿ ಪೊಲೀಸ್ ಸ್ಟೇಷನ್‌ಗೆ ಬಂದು ದೂರು ಸಲ್ಲಿಸಿದ:

'ನನ್ನ ಹೆಂಡತಿ ಪಾತ್ರೆ, ಲಟ್ಟಣಿಗೆ, ಚಮಚ ಹೀಗೆ ಏನೇ ಕೈಗೆ ಸಿಕ್ಕರೂ ಅದರಿಂದ ನನಗೆ ಹೊಡೆಯುತ್ತಾಳೆ.'

'ಹೀಗೆ ಎಷ್ಟು ದಿನಗಳಿಂದ ಹೊಡೆಯುತ್ತಿದ್ದಾಳೆ?' ಇನ್ಸ್‌ಪೆಕ್ಟರ್ ಪ್ರಶ್ನಿಸಿದರು.

'ಕಳೆದ ಐದು ವರ್ಷಗಳಿಂದ.'

'ಆಗಲೇ ಯಾಕೆ ದೂರು ಕೊಡಲಿಲ್ಲ?'

'ನಿಜ ಹೇಳಬೇಕೆಂದರೆ ಮೊನ್ನೆಯಿಂದ ಅವಳ ಗುರಿ ಪರ್‌ಫೆಕ್ಟಾಗಿದೆ!'

(ಸಂ) ಡಿ.ಎನ್. ಶ್ರೀನಾಥ್